# ಕರ್ನಾಟಕ ಸರ್ಕಾರ
# ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

ರಾಜ್ಯದಲ್ಲಿರುವ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ 12 ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ ಕೇಂದ್ರ ಪಠ್ಯಕ್ರಮ (CBSE) ಆಧಾರಿತ 2026-27ನೇ ಸಾಲಿನ 6 ನೇ ತರಗತಿ ಪ್ರವೇಶಕ್ಕಾಗಿ ಪರಿಶಿಷ್ಟ ಪಂಗಡಗಳ ಬಾಲಕ/ಬಾಲಕಿಯರಿಂದ ಅರ್ಜಿ ಸಲ್ಲಿಕೆ, ಪ್ರವೇಶ ಪರೀಕ್ಷೆ ಮತ್ತು ದಾಖಲಾತಿಯ ಮಾರ್ಗಸೂಚಿಗಳು.


ಕರ್ನಾಟಕ ಪರೀಕ್ಷಾ ಪ್ರಾಧಿಕಾರ

18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ,

ಬೆಂಗಳೂರು - 560 012

ಇ-ಮೇಲ್ keauthority-ka@nic.in

ವೆಬ್ ಸೈಟ್: **https://cetonline.karnataka.gov.in/kea/** ಸಹಾಯವಾಣಿ: 080-23 460 460

(5 ಲೈನ್‌ಗಳು) (ಬೆ. 9.30 ರಿಂದ ಸಂ. 6.00 ರ ವರೆಗೆ)


## ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ

### ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘ

ಇ - ಮಾಹಿತಿ ಪುಸ್ತಕ


ನಂ.34, ಲೋಟಸ್ ಟವರ್ಸ್, ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ,

ಬೆಂಗಳೂರು – 560 001

ದೂರವಾಣಿ ಸಂಖ್ಯೆ: 080- 22261787.

ಇ-ಮೇಲ್: **kests3012@gmail.com**

ವೆಬ್ ಸೈಟ್: **https://twd.karnataka.gov.in**

| ಕ್ರ ಸಂ | ವಿಷಯ ಸೂಚಿ | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ | 03 |
| 2 | ಏಕಲವ್ಯ ಮಾದರಿ ವಸತಿ ಶಾಲೆಗಳ 2026-27ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ ನಡೆಸುವ ಪ್ರವೇಶ ಪರೀಕ್ಷೆ ಹಾಗೂ ಇತರ ಕಾರ್ಯಕ್ರಮಗಳ ವೇಳಾಪಟ್ಟಿಯ ವಿವರಗಳು | 03 |
| 3 | ಲಭ್ಯವಿರುವ ಸ್ಥಾನಗಳ ಸಂಖ್ಯೆ | 03 - 04 |
| 4 | ಸ್ಥಳೀಯ ಅಭ್ಯರ್ಥಿ ಮತ್ತು  ಜಾತಿ ಮತ್ತು ಆದಾಯ ಪ್ರಮಾಣ ಪತ್ರ | 04 |
| 5 | ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು | 04 |
| 6 | ಪ್ರವೇಶ ಪರೀಕ್ಷೆಗೆ ವಸತಿ ಶಾಲೆಗಳ ಮೂಲಕ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಸ್ವಂತ ಜಿಲ್ಲೆಯಲ್ಲಿರುವ ವಸತಿ ಶಾಲೆಗಳ ಆಯ್ಕೆಗೆ ಆಧ್ಯತೆ ದಾಖಲಿಸುವ ವಿಧಾನ | 04 – 06 |
| 7 | ಪ್ರವೇಶ ಪರೀಕ್ಷೆ ವಿಧಾನ | 06 |
| 8 | ಲಿಖಿತ ಪರೀಕ್ಷೆಗೆ ಸಂಬAಧಿಸಿದ ಹೆಚ್ಚಿನ ಮಾಹಿತಿ | 06 - 10 |
| 9 | ಸಮಾನ ಅಂಕಗಳು ಬಂದಾಗ ಮೆರಿಟ್ ನಿರ್ಣಯ | 10 |
| 10 | ಫಲಿತಾಂಶ ಪ್ರಕಟಣೆ | 10 |
| 11 | ಸೀಟು ಹಂಚಿಕೆ ಮತ್ತು ದಾಖಲಾತಿ (ಕೌನ್ಸಲಿಂಗ್ ವಿಧಾನ) | 10 - 11 |
| 12 | ಸಂಕ್ಷಿಪ್ತ ಮಾಹಿತಿ | 12 - 13 |

## 1. ಪೀಠಿಕೆ:-

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಪರಿಶಿಷ್ಟ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಸತಿ ಸಹಿತ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 12 ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಈ ಎಲ್ಲಾ ವಸತಿ ಶಾಲೆಗಳಿಗೆ ಪ್ರಾರಂಭಿಕ ತರಗತಿಯಾದ 6ನೇ ತರಗತಿಗೆ ಒಟ್ಟು 720 ಸೀಟುಗಳನ್ನು ಪ್ರವೇಶ ಪರೀಕ್ಷೆ ನಡೆಸಿ ಆನ್‌ಲೈನ್ ಪ್ರಕ್ರಿಯೆ ಮುಖಾಂತರ ವಿದ್ಯಾರ್ಥಿಗಳನ್ನು ಭರ್ತಿ ಮಾಡಲು ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿರುತ್ತದೆ.

ಅದರಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ರಾಜ್ಯಾದ್ಯಂತ ಏಕಕಾಲದಲ್ಲಿ ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು ಹಾಗೂ ಸದರಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ರಾಜ್ಯಮಟ್ಟದ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಅನ್ವಯಿಸುವ ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆಧ್ಯತಾ ಕ್ರಮದ ಆಧಾರದ ಮೇಲೆ ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ Computerised Auto Selection ಮೂಲಕ ಸೀಟು ಹಂಚಿಕೆ ಮಾಡಲಾಗುವುದು.

## 2. ವಸತಿ ಶಾಲೆಗಳ 2026-27 ನೇ ಶೈಕ್ಷಣಿಕ ಸಾಲಿನ 6 ನೇ ತರಗತಿ ದಾಖಲಾತಿಗಾಗಿ ನಡೆಸುವ ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ. ಸಂ | ವಿವರ | ದಿನಾಂಕ |
|---|---|---|
| 1 | ಅಧಿಸೂಚನೆಯನ್ನು ದಿನಪತ್ರಿಕೆಗಳಲ್ಲಿ ಮತ್ತು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸುವ ದಿನಾಂಕ | **ದಿನಾಂಕ:09.01.2026** |
| 2 | ಮಾಹಿತಿ ಪುಸ್ತಕವನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸುವ ದಿನಾಂಕ | **ದಿನಾಂಕ:13.01.2026** |
| 3 | ಘೋಷಣ ಪತ್ರವನ್ನು ಪ್ರಾಧಿಕಾರದ ವೆಬ್ ಸೈಟ್ ನಿಂದ ಡೌನ್ ಲೋಡ್ ಮಾಡಿಕೊಂಡು ಭರ್ತಿಮಾಡಿ ವಸತಿ ಶಾಲೆಗಳಿಗೆ ಸಲ್ಲಿಸುವ ದಿನಾಂಕ: | **ದಿನಾಂಕ:10.01.2026 ರಿಂದ ದಿನಾಂಕ:25.01.2026 ವರೆಗೆ** |
| 4 | ಆನ್‌ಲೈನ್ ಮುಖಾಂತರ ಹತ್ತಿರದ ವಸತಿ ಶಾಲೆಯಿಂದ ಅರ್ಜಿ ಸಲ್ಲಿಸುವುದು | **ದಿನಾಂಕ:19.01.2026 ರಿಂದ ದಿನಾಂಕ:02.02.2026 ವರೆಗೆ** |
| 5 | ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು (Hall Ticket) ಅರ್ಜಿ ಸಲ್ಲಿಸಿದ ವಸತಿ ಶಾಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳುವುದು | **ದಿನಾಂಕ:18.02.2026** |
| 6 | ಪ್ರವೇಶ ಪರೀಕ್ಷೆ - 2026 | **ದಿನಾಂಕ:01-03-2026** |
| 7 | ಪ್ರವೇಶ ಪರೀಕ್ಷೆಯ ಫಲಿತಾಂಶ | **ಮಾರ್ಚ್-2026 ನಾಲ್ಕನೇ ವಾರ** |
| 8 | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಮೊದಲನೆ ಸುತ್ತಿನ ಸೀಟು ಹಂಚಿಕೆ | **ಎಪ್ರಿಲ್-2026 ರ ಒಂದನೇ ಮತ್ತು ಎರಡನೇ ವಾರ** |
| 9 | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಎರಡನೆ ಸುತ್ತಿನ ಸೀಟು ಹಂಚಿಕೆ. | **ಏಪ್ರಿಲ್ -2026 ರ ಮೂರನೇವಾರ ಮತ್ತು ನಾಲ್ಕನೇವಾರ** |
| 10 | ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಮೂರನೇ ಸುತ್ತಿನ ಸೀಟುಹಂಚಿಕೆ. (ಅವಶ್ಯವಿದ್ದಲ್ಲಿ) | **ಮೇ-2026, ಒಂದು ಮತ್ತು ಎರಡನೇ ವಾರ** |

## 3. ಲಭ್ಯವಿರುವ ಸ್ಥಾನಗಳ ಸಂಖ್ಯೆ:-

1. ರಾಜ್ಯದಲ್ಲಿ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ 12 ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಲಭ್ಯವಿರುವ ಸ್ಥಾನಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಸತಿ ಶಾಲೆಯ ಹೆಸರು | 6ನೇ ತರಗತಿಗೆ ಪ್ರತಿ ಶಾಲೆಗೆ ಮಂಜೂರಾತಿ ಸಂಖ್ಯೆ | ಲಭ್ಯವಿರುವ ಒಟ್ಟು ಸ್ಥಾನಗಳು |
|---|---|---|---|
| 1 | ಏಕಲವ್ಯ ಮಾದರಿ ವಸತಿ ಶಾಲೆ, ಬಲಗೋಡು, ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆ | 60 | 60 |
| 2 | ಏಕಲವ್ಯ ಮಾದರಿ ವಸತಿ ಶಾಲೆ,ಕ ತರುವೆ ಕೊಟ್ಟಿಗೆರ, ಮೂಡಿಗೆರೆ ತಾಲೂಕು, ಚಿಕ್ಕಮಗಳೂರು ಜಿಲ್ಲೆ. | 60 | 60 |
| 3 | ಏಕಲವ್ಯ ಮಾದರಿ ವಸತಿ ಶಾಲೆ, ಸೊಳ್ಳೇಪುರ, ಹೆಚ್.ಡಿ.ಕೋಟೆ ತಾಲೂಕು, ಮೈಸೂರು ಜಿಲ್ಲೆ. | 60 | 60 |
| 4 | ಏಕಲವ್ಯ ಮಾದರಿ ವಸತಿ ಶಾಲೆ, ಮಂಗಲ, ಹನೂರು ತಾಲೂಕು, ಚಾಮರಾಜನಗರ ಜಿಲ್ಲೆ. | 60 | 60 |
| 5 | ಏಕಲವ್ಯ ಮಾದರಿ ವಸತಿ ಶಾಲೆ, ದೇವರಕೊಟ್ಟ, ಹಿರಿಯೂರು ತಾಲೂಕು, ಚಿತ್ರದುರ್ಗ ಜಿಲ್ಲೆ. | 60 | 60 |
| 6 | ಏಕಲವ್ಯ ಮಾದರಿ ವಸತಿ ಶಾಲೆ ಕೊಳಗಲ್ಲು, ಬಳ್ಳಾರಿ ತಾ\|\| & ಜಿ\|\| | 60 | 60 |
| 7 | ಏಕಲವ್ಯ ಮಾದರಿ ವಸತಿ ಶಾಲೆ, ಗಂಗನಗಾರಿಪಲ್ಲಿ, ಶ್ರೀನಿವಾಸಪುರ ತಾಲೂಕು, ಕೋಲಾರ ಜಿಲ್ಲೆ. | 60 | 60 |
| 8 | ಏಕಲವ್ಯ ಮಾದರಿ ವಸತಿ ಶಾಲೆ, ಕೊತ್ತದೊಡ್ಡಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ. | 60 | 60 |
| 9 | ಏಕಲವ್ಯ ಮಾದರಿ ವಸತಿ ಶಾಲೆ, ಬಜ್ಜನಹಳ್ಳಿ ಕೊರಟಗೆರೆ ತಾಲೂಕು, ತುಮಕೂರು ಜಿಲ್ಲೆ. | 60 | 60 |
| 10 | ಏಕಲವ್ಯ ಮಾದರಿ ವಸತಿ ಶಾಲೆ, ಬಂಡಳ್ಳಿ, ಯಾದಗಿರಿ ತಾ\|\| & ಜಿ\|\|. | 60 | 60 |
| 11 | ಏಕಲವ್ಯ ಮಾದರಿ ವಸತಿ ಶಾಲೆ,  ಕೊಂಚೂರು, ಚಿತ್ತಾಪೂರ ತಾಲೂಕು, ಗುಲ್ಬರ್ಗಾ ಜಿಲ್ಲೆ. | 60 | 60 |
| 12 | ಏಕಲವ್ಯ ಮಾದರಿ ವಸತಿ ಶಾಲೆ,  ತವಗ, ಗೋಕಾಕ್ ತಾಲೂಕು, ಬೆಳಗಾವಿ ಜಿಲ್ಲೆ. | 60 | 60 |
| **ಒಟ್ಟು** | | **720** | **720** |

2. **ಸ್ಥಳೀಯ ಅಭ್ಯರ್ಥಿ:** ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು SATS ನಲ್ಲಿ ಲಭ್ಯವಿರುವ ಸ್ಥಳೀಯ ಅಭ್ಯರ್ಥಿ ಮಾಹಿತಿ ಅಥವಾ ಆಧಾರ್ ಕಾರ್ಡ್ ಅಥವಾ ಜಾತಿ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿ ಅಥವಾ ವಾಸಸ್ಥಳ ಪ್ರಮಾಣ ಪತ್ರ ಹೊಂದಿರಬೇಕು**.**

3. **ಜಾತಿ ಪ್ರಮಾಣ ಪತ್ರ:** ಪರಿಶಿಷ್ಟ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು.

4. **ಅಭ್ಯರ್ಥಿ ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:**
    1. 2025-26ನೇ ಸಾಲಿನಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿರುತ್ತಾರೆ. ದಾಖಲೆ ಪರಿಶೀಲನೆ ಸಂದರ್ಭದಲ್ಲಿ 5ನೇ ತರಗತಿ ಉತ್ತೀರ್ಣರಾಗಿರುವ ಅಂಕಪಟ್ಟಿ ಹೊಂದಿರಬೇಕು.
    2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
    3. 10 ರಿಂದ 13 ವಯೋಮಾನದವರಾಗಿರಬೇಕು.

4. **ಪ್ರವೇಶ ಪರೀಕ್ಷೆಗೆ ವಸತಿ ಶಾಲೆಗಳ ಮೂಲಕ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ವಸತಿ ಶಾಲೆಗಳ ಆಯ್ಕೆಗೆ ಆದ್ಯತೆ ದಾಖಲಿಸುವ ವಿಧಾನ:**

2026-27 ನೇ ಸಾಲಿನಲ್ಲಿ 6ನೇ ತರಗತಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳ ಪೋಷಕರು ಈ ಕೆಳಕಂಡ ದಾಖಲಾತಿಗಳೊಂದಿಗೆ ಹತ್ತಿರದ ಯಾವುದಾದರೊಂದು ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆಯನ್ನು ಸಂಪರ್ಕಿಸಲು ಸೂಚಿಸಿದೆ. ಅಭ್ಯರ್ಥಿಯ ಮಾಹಿತಿಗಳಾದ ಹೆಸರು, ಜನ್ಮದಿನಾಂಕ, ಸ್ವಂತ ತಾಲೂಕು ಮತ್ತು ಜಿಲ್ಲೆ ಹಾಗೂ ಇನ್ನಿತರೆ ಮಾಹಿತಿಗಳನ್ನು SATS (Student Achievement Tracking System) ತಂತ್ರಾಂಶದಿಂದ ಸಂಖ್ಯೆಯನ್ನು ನಮೂದಿಸಿ ಪಡೆಯಲಾಗುವುದು.

ಈ ಕೆಳಕಂಡ ದಾಖಲೆಗಳನ್ನು ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಹತ್ತಿರದ ಏಕಲವ್ಯ ಮಾದರಿ ವಸತಿ ಶಾಲೆಗೆ ಕಡ್ಡಾಯವಾಗಿ ತೆಗೆದುಕೊಂಡು ಹೋಗಬೇಕು.

1. Student Achievement Tracking System (SATS) ಸಂಖ್ಯೆ.
2. ಇತ್ತೀಚಿನ ಭಾವಚಿತ್ರ.
3. ಮೀಸಲಾತಿಯ ಪ್ರಯೋಜನೆಗಳನ್ನು ಕೋರಿರುವ ಪಕ್ಷದಲ್ಲಿ, ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ.
4. ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು ಅಗತ್ಯವಾದ ಆಧಾರ್ ಕಾರ್ಡ್/ರೇಷನ್ ಕಾರ್ಡ್/ಸ್ಥಳೀಯ ಪ್ರಮಾಣ ಪತ್ರ.
5. ವಿಶೇಷ ಪ್ರವರ್ಗಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳು.

**5. ಅರ್ಜಿ ಸಲ್ಲಿಸುವ ವಿಧಾನ/ವಿವರಗಳು:**

ಅರ್ಜಿ ಭರ್ತಿ ಮಾಡುವಾಗ ಈ ಕೆಳಕಂಡ ವಿಧಾನಕ್ಕೆ ಹೆಚ್ಚು ಗಮನ ನೀಡುವುದು.

1. ಅಭ್ಯರ್ಥಿಯ ಹೆಸರನ್ನು ದಪ್ಪ ಅಕ್ಷರಗಳಿಂದ ತುಂಬಿಸುವುದು.
2. ಹುಟ್ಟಿದ ದಿನಾಂಕವನ್ನು ಮೊದಲು ದಿನಾಂಕ, ತಿಂಗಳು ಮತ್ತು ವರ್ಷವನ್ನು ಸರಿಯಾಗಿ ಭರ್ತಿ ಮಾಡುವುದು.
3. ವಯಸ್ಸು 10 ರಿಂದ 13 ವರ್ಷ ತುಂಬಿರಬೇಕು.
4. ಆಧಾರ್ ನಂಬರ್ ಮತ್ತು ವಾಸಸ್ಥಳದ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು.
5. ಶಾಲೆಯಲ್ಲಿ (SATS) ನಮೂದಿಸಿರುವ ಜಾತಿಯನ್ನೇ ಅರ್ಜಿಯಲ್ಲಿ ಭರ್ತಿ ಮಾಡುವುದು.

**6. Reservations Admission**

The reservation policy at the block , district, and state level will be Implemented **from the academic Session 2026-27**, following the approval of the 15 Governing Body Meeting:

**Reservation Table**

| Reservation In Admission | | | | As Approved | | |
|---|---|---|---|---|---|---|
| S No | Reservation Category for the State | (i) In % (for 60 Seats) | (ii) Total Seat for Particular Category (i) Of 60 seats | In terms of Seats in class VI (Out of 60 Seats) | | |
| | | | | (iii) Block(50 %) 50% of (ii) | (iv) District (30%) 30% of (ii) | (v) State (20 %) 20% of (ii) |
| I | ST Children | 80% | 48 | 24 | 15 | 9 |
| II | Children belonging in to PVTG communities | 5% | 3 | 2 | 1 | 0 |

| | | | | | | |
|---|---|---|---|---|---|---|
| III | Children belonging to DNT/NT/SNT community | 5% | 3 | 2 | 1 | 0 |
| IV | a)Children who have lost their parents to LWE*/insurgencies/Covid, | | | | | |
| | b) Children of Widows | | | | | |
| | c) Children of Divyang Parent, Others e.g. Land doner, orphan child etc. | 7% | 4 | 2 | 2 | 0 |
| | | | | | | |
| V | Land doner# | 3% | 2 | 1 | 1 | 0 |
| **Total** | | **100** | **60** | **31** | **20** | **9** |
| | Childrern of Staff of EMRSs/EMDBSs/CES/Doctors/Para medical staff of Government Hospital serving in the same block. | | No Change | | | |
| **Note:** | | | | | | |
| VI | Children of Staff of EMRSs/EMDBSs/CES/Doctors/Para medical staff of Government Hospital serving in the same block. | a) Over and above the sanction strength of 30 students per section per class with the restiriction of maximum 40 students in one section<br>b) This facility shall be extended to only eldest two surviving children.<br>c) The principal is authorized to admit the children of staff in the respective EMRSs/EMDBSs/CES where the parent is working and Doctors/Paramedical staff of Government Hospital working in the same block.<br>d) Further, no additional financial implications are to be borne by EMRSs/EMDBSs/MoTA as these children shall not be a part of EMRS Scheme. Since, no fee is prescribed in EMRSs Scheme, hence the same shall not be charged from these students.<br>e) **Exception**:- These children, if eligible/qualify, are allowed to participate in the competitions/events (Sports/Culture etc.) organized by EMRSs/State or UT EMRSs Society/NESTS/MoTA and the expenditure on these children on account of their participation in these activities shall be met out of the fund released by NESTS/MoTA. | | | | |

**Notes**

1. * It includes citizens victim of LWE and Police/Para mlitary/Armed forces personnel who have lost their lives fighting LWE.
2. # Admission against the Land doner quota will be given in that particular EMRS wherein the doner has donated the land.
3. 5% i.e., 3 seats out of 60 seats are reserved for children with bench mark disability. These seats shall be carved out @ 2 seats from ST and 1 seat from others
4. If candidates are not available either under (iv) a, b & c or (iv) d, the seats may be filled from any category of (iv) on merit.

6. ಯಾವ ಪಂಗಡಕ್ಕೆ ಸೇರಿರುತ್ತೀರಿ- ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು (80%) ನೈಜದುರ್ಬಲ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳು (PVTGs) (ಜೇನುಕುರುಬ ಮತ್ತು ಕೊರಗ) (5%) /ಡಿ-ನೋಟಿಫೈಡ್/ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳು (5%)/ ಎಡಪಂಥೀಯ ಉಗ್ರವಾದ/ದಂಗೆಗಳು/ ಕೋವಿಡ್ ನಿಂದ ಪೋಷಕರು ಮೃತಪಟ್ಟು ಅನಾಥವಾಗಿರುವ

ಮಕ್ಕಳು/ ವಿಧವೆಯರ ಮಕ್ಕಳು/ ವಿಕಲಚೇತನ ಪೋಷಕರ ಮಕ್ಕಳು/ ಅನಾಥ ಮಗು (7%) ಮತ್ತು ಭೂ ದಾನಿಗಳ ಮಕ್ಕಳು/ (3%). ಈ ಎಲ್ಲಾ ಮೀಸಲಾತಿಗೆ ಪ್ರಮಾಣ ಪತ್ರ ಕಡ್ಡಾಯ.

7. ವಿಕಲಚೇತನದ ಸ್ಟೇಟಸ್ ಮತ್ತು ಅದರ ಶೇಕಡ.
8. ಎಲ್ಲಾ ಶಾಲೆಗಳ ಆದ್ಯತೆಯನ್ನು ಕಡ್ಡಾಯವಾಗಿ ನಮೂದಿಸುವುದು.
9. ಪೋಷಕರ ಮತ್ತು ವಿದ್ಯಾರ್ಥಿಯ ಸಹಿ.
10. ಪ್ರತಿ ಶಾಲೆಯ 6 ನೇ ತರಗತಿಯಲ್ಲಿ (2026-27) ನೇ ಸಾಲಿನಲ್ಲಿ 60 ಸೀಟುಗಳು ಲಭ್ಯವಿದ್ದು, ಇದರಲ್ಲಿ 50 % ಅಂದರೆ 31 ಸ್ಥಾನಗಳು ಬ್ಲಾಕ್(ತಾಲೂಕು) ಮಟ್ಟದಲ್ಲಿ, 20 ಸ್ಥಾನಗಳು, ಜಿಲ್ಲಾ ಮಟ್ಟದಲ್ಲಿ, 9 ಸ್ಥಾನಗಳು ರಾಜ್ಯ ಮಟ್ಟದಲ್ಲಿ ಮೀಸಲಿಡಲಾಗಿದೆ.

ಅಭ್ಯರ್ಥಿಯ SATS ಸಂಖ್ಯೆಯನ್ನು ನಮೂದಿಸಿದಾಗ ಮೇಲಿನ ಎಲ್ಲಾ ವಿವರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ನೋಡಬಹುದು. ಯಾವುದಾದರೂ ಮಾಹಿತಿಯಲ್ಲಿ ದೋಷವಿದ್ದರೇ ಸಂಬಂಧಪಟ್ಟ ಶಾಲೆಯ ಮುಖ್ಯೋಪಾದ್ಯಾಯರನ್ನು ಸಂಪರ್ಕಿಸಿ ಮಾಹಿತಿಯನ್ನು ಸರಿಪಡಿಸಿಕೊಂಡು ಅನಂತರ ಅರ್ಜಿ ಸಲ್ಲಿಸುವುದು.

**ಗಮನಿಸಿ:** ಸೀಟು ಹಂಚಿಕೆಯು ಅಭ್ಯರ್ಥಿಯ ಲಿಂಗ, ಜಾತಿ ಮತ್ತು ಆದಾಯದ ಆಧಾರದ ಮೇಲೆ ಹಾಗೂ ಇತರ ಮಾಹಿತಿಯ ಮೇಲೆ ಅವಲಂಬಿತವಾಗಿರುವುದರಿಂದ SATS ನಲ್ಲಿರುವ ಅಭ್ಯರ್ಥಿಯ ಎಲ್ಲಾ ಮಾಹಿತಿಗಳನ್ನು ತಪ್ಪದೇ ಪರಿಶೀಲಿಸಿಕೊಳ್ಳತಕ್ಕದ್ದು.

1. ಅಭ್ಯರ್ಥಿಯು ತನ್ನ ಮೀಸಲಾತಿಯಡಿಯಲ್ಲಿ ಸೀಟು ಪಡೆಯಲು ಅರ್ಹತೆಗೊಳ್ಳಲು, ತಾನು ಯಾವ ಮೀಸಲಾತಿ ಅಡಿಯಲ್ಲಿ ಅರ್ಹನಿರುವನೋ ಅಂದರೆ, ಪರಿಶಿಷ್ಟ ಪಂಗಡ ವರ್ಗಕ್ಕೆ ಸಂಬಂಧಿಸಿದ RD ಸಂಖ್ಯೆಯನ್ನೊಳಗೊಂಡ ನಿಗದಿತ ಜಾತಿ ಪತ್ರದ ಪ್ರತಿಯನ್ನು ಪಡೆದು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಯು ವಿಶೇಷ ವರ್ಗಕ್ಕೆ ಸೇರಿದ ಅಭ್ಯರ್ಥಿ ಆಗಿದ್ದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರಗಳನ್ನು ಪಡೆದಿರತಕ್ಕದ್ದು.
3. ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ತನ್ನ ಪೋಷಕರ ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು.
4. ಅಭ್ಯರ್ಥಿಯು ಯಾವ ವಸತಿ ಶಾಲೆಗಳಿಗೆ ಪ್ರವೇಶ ಪಡೆಯಲು ಮೀಸಲಾತಿಗನುಗುಣವಾಗಿ ಅರ್ಹನಾಗಿರುತ್ತಾನೆ. ಸೀಟು ಹಂಚಿಕೆಯು ರಾಜ್ಯ ಹಂತದಲ್ಲಿ ಆನ್‌ಲೈನ್ ಮುಖಾಂತರ ನಡೆಸುವುದರಿಂದ ವಸತಿ ಶಾಲೆಯಿಂದ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ಯಾವ ವಸತಿ ಶಾಲೆಗಳಲ್ಲಿ ಪ್ರವೇಶ ಬಯಸುತ್ತಾರೋ ಅಂತಹ ವಸತಿ ಶಾಲೆಗಳಿಗೆ ಆದ್ಯತೆ ಅನುಸಾರ ತನ್ನ ಇಚ್ಛೆ / 5 ಆಯ್ಕೆಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು.
5. ಅಭ್ಯರ್ಥಿಯು ವಸತಿ ಶಾಲೆಯ ಪ್ರವೇಶಕ್ಕಾಗಿ ಶಾಲೆಯ ಆದ್ಯತೆಗಳನ್ನು ನೀಡುವ ಸಲುವಾಗಿ ಅರ್ಜಿ ಸಲ್ಲಿಸುವ ಶಾಲೆಯಿಂದ "ಶಾಲಾ ಆದ್ಯತೆ ವಿವರವನ್ನು ಸಲ್ಲಿಸುವ ಪ್ರತಿ" ಯನ್ನು ಪಡೆದು ಆದ್ಯತೆಗಳನ್ನು ಬರೆದು ಅಭ್ಯರ್ಥಿಯ ಹಾಗು ಪೋಷಕರ ಸಹಿಯೊಂದಿಗೆ ವಸತಿ ಶಾಲೆಯ ಮುಖ್ಯಸ್ಥರಿಗೆ ನೀಡಬೇಕು.
6. ಅರ್ಜಿಯನ್ನು ವಸತಿ ಶಾಲೆಯಲ್ಲಿ ಸಲ್ಲಿಸಿದ ನಂತರ ಅದೇ ಶಾಲೆಯಿಂದ ಸ್ವೀಕೃತಿಯನ್ನು ಅಥವಾ ಅರ್ಜಿಯ ಪ್ರತಿಯನ್ನು ಪಡೆದು ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತದವರೆವಿಗೂ ತನ್ನ ಬಳಿ ಇರಿಸಿಕೊಳ್ಳತಕ್ಕದ್ದು.

**ಸೂಚನೆ:** ಹೆಚ್ಚಿನ ಮಾಹಿತಿಗಾಗಿ ಅಪರ/ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ/ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ/ಪ್ರಾಂಶುಪಾಲರು, ಏಕಲವ್ಯ ಮಾದರಿ ವಸತಿ ಶಾಲೆ ರವರುಗಳನ್ನು ಸಂಪರ್ಕಿಸುವುದು.

## 7. ಪ್ರವೇಶ ಪರೀಕ್ಷೆ ವಿಧಾನ

2026-27 ಶೈಕ್ಷಣಿಕ ಸಾಲಿಗೆ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 12 ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು, ಪರೀಕ್ಷೆಯ ವೇಳಾಪಟ್ಟಿ ಈ ಕೆಳಕಂಡಂತಿದೆ.

| ದಿನಾಂಕ | ದಿನ | ಸಮಯ | ಒಟ್ಟು ಅಂಕಗಳು |
|---|---|---|---|
| 01.03.2026 | ಭಾನುವಾರ | ಬೆ.11.00 ರಿಂದ ಮ.1.00 | 100 |

ಪರೀಕ್ಷೆಯನ್ನು ರಾಜ್ಯ ಮಟ್ಟದಲ್ಲಿ ಏಕಕಾಲಕ್ಕೆ ನಡೆಸಲಾಗುವುದು, ಅಭ್ಯರ್ಥಿಯು ಅರ್ಜಿ ಸಲ್ಲಿಸುವಾಗ ನಮೂದಿಸಿದ ತಾಲ್ಲೂಕಿನ / ಜಿಲ್ಲೆಯ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಲಾಗಿದೆ. ಸಾಧ್ಯವಾದಷ್ಟು ತಾಲ್ಲೂಕುವಾರು ಪರೀಕ್ಷಾ ಕೇಂದ್ರಗಳನ್ನು ತಾಲ್ಲೂಕುವಾರು ಸ್ವೀಕರಿಸಲಾದ ಅರ್ಜಿಗಳಿಗೆ ಅನುಗುಣವಾಗಿ ಗುರುತಿಸಲಾಗುವುದು.

ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರವನ್ನು (Hall Ticket) ತಾವು ಅರ್ಜಿ ಸಲ್ಲಿಸಿದ ವಸತಿ ಶಾಲೆಯ ಮುಖಾಂತರ ಪಡೆದು, ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿಕೊಂಡು ನಿಗದಿತ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ಸಂಬಂಧಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಸೂಚಿಸಿದೆ.

## 8. ಲಿಖಿತ ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ:

### 8.1. ಪಠ್ಯಕ್ರಮ:

1. 6ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು (ನೇರ ಪ್ರವೇಶಾತಿ ಕಲ್ಪಿಸಿರುವ ವರ್ಗಗಳ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಕಡ್ಡಾಯವಾಗಿ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು.
2. ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ 100 ಅಂಕದ ಬಹು ಆಯ್ಕೆ ಮಾದರಿಯಲ್ಲಿರುತ್ತದೆ.

| | | |
|---|---|---|
| ಕನ್ನಡ | 20 ಪ್ರಶ್ನೆ | 20- ಅಂಕ |
| ಇಂಗ್ಲೀಷ್ | 20 ಪ್ರಶ್ನೆ | 20- ಅಂಕ |
| ಗಣಿತ | 20 ಪ್ರಶ್ನೆ | 20- ಅಂಕ |
| ಸಮಾಜ ವಿಜ್ಞಾನ | 20 ಪ್ರಶ್ನೆ | 20- ಅಂಕ |
| ಸಾಮಾನ್ಯ ವಿಜ್ಞಾನ | 20 ಪ್ರಶ್ನೆ | 20- ಅಂಕ |
| **ಒಟ್ಟು** | **100 ಪ್ರಶ್ನೆ** | **100- ಅಂಕ** |

3. 100 ಅಂಕದ 100 ಪ್ರಶ್ನೆಗಳಿಗೆ ಉತ್ತರಿಸಲು 120 ನಿಮಿಷದ ಸಮಯಾವಕಾಶ ಇರುತ್ತದೆ.
4. ವಸತಿ ಶಾಲೆಯ ಸೀಟು ಹಂಚಿಕೆಗಾಗಿ, ವಿದ್ಯಾರ್ಥಿಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕ, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮವನ್ನು ಪರಿಗಣಿಸಲಾಗುವುದು.
5. ಪ್ರಶ್ನೆ ಪತ್ರಿಕೆಯು ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಯಲ್ಲಿರುತ್ತದೆ.
6. ಶೇ 90% ರಷ್ಟು ಪ್ರಶ್ನೆಗಳು 4 ಮತ್ತು 5ನೇ ತರಗತಿಯ ಪಠ್ಯಾಧಾರಿತವಾಗಿರುತ್ತದೆ.
7. ಮಾದರಿ ಪ್ರಶ್ನೆ ಪತ್ರಿಕೆಯ ಪ್ರತಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಮತ್ತು ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ https://twd.karnataka.gov.in ನಲ್ಲಿ ಪ್ರಕಟಿಸಲಾಗುವುದು.

**8.2. ಕಾಲಾವಧಿ, ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರದ ಹಾಳೆಗಳು:**

ಪ್ರತಿಯೊಂದು ಪ್ರಶ್ನೆಪತ್ರಿಕೆಯೂ ಬಹು ಆಯ್ಕೆಯ ಪ್ರಶ್ನೆಗಳ (ವಸ್ತುನಿಷ್ಠ) ಸ್ವರೂಪದ್ದಾಗಿರುತ್ತದೆ. ಪ್ರಶ್ನೆ ಪತ್ರಿಕೆಯು ಬೇರೆ ಬೇರೆ ಆವೃತ್ತಿಗಳಲ್ಲಿ ಇರುತ್ತವೆ ಮತ್ತು ಪ್ರತಿಯೊಂದು ಪ್ರಶ್ನೆಯು ನಾಲ್ಕು ಬೇರೆ ಬೇರೆ ಆಯ್ಕೆಗಳನ್ನು ಹೊಂದಿರುತ್ತದೆ. ಪ್ರತಿಯೊಂದು ಪ್ರಶ್ನೆಗೆ ಒಂದು ಅಂಕವನ್ನು ನಿಗದಿಪಡಿಸಲಾಗಿರುತ್ತದೆ. ತಪ್ಪು/ಸರಿಯಲ್ಲದ ಉತ್ತರಗಳಿಗೆ ಯಾವುದೇ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ. ಆದರೆ, ಒಂದೇ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಗುರುತು ಹಾಕಿದ್ದಲ್ಲಿ, ಅಂತಹ ಉತ್ತರಕ್ಕೆ ಯಾವುದೇ ಅಂಕವನ್ನು ನೀಡುವುದಿಲ್ಲ. ಪ್ರಶ್ನೆಪತ್ರಿಕೆಯ ಆವೃತ್ತಿಯ ಸಂಕೇತವನ್ನು ಪ್ರಶ್ನೆ ಪತ್ರಿಕೆಯ ಮುಖಪುಟದ ಮೇಲೆ ದಪ್ಪನಾಗಿ ಮುದ್ರಿಸಲಾಗಿರುತ್ತದೆ.

**8.3. ಉತ್ತರದ ಹಾಳೆಗಳಾಗಿ ಆಪ್ಟಿಕಲ್ ಮಾರ್ಕ್ ರೀಡರ್ (OMR) ಹಾಳೆಗಳ ಬಳಕೆ:**

ವಿದ್ಯಾರ್ಥಿಗಳು, ಉತ್ತರಗಳನ್ನು ಗುರುತು ಹಾಕುವುದಕ್ಕಾಗಿ ಉಪಯೋಗಿಸಲಾಗುವ ಆಪ್ಟಿಕಲ್ ಮಾರ್ಕ್ರೀಡರ್ (OMR) ಹಾಳೆಗಳ ಮಾದರಿಯನ್ನು ಕ.ಪ.ಪ್ರಾ.ದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು. ಉತ್ತರ ಪತ್ರಿಕೆಯ ಪಡಿಯಚ್ಚು ಪ್ರತಿ ಇರುವಂತೆ ಉತ್ತರ ಪತ್ರಿಕೆಯನ್ನು ರೂಪಿಸಬೇಕಾದ ಅಗತ್ಯವಿದ್ದುದರಿಂದ, ಒಂದೇ ಬದಿಯಲ್ಲಿ ಎಲ್ಲಾ ಮಾಹಿತಿ ಇರುವಂತೆ ಮತ್ತು ಉತ್ತರಗಳನ್ನು ಸಹ ಅದೇ ಬದಿಯಲ್ಲಿ ಗುರುತು ಮಾಡುವಂತೆ OMR ಹಾಳೆಯನ್ನು ವಿನ್ಯಾಸಗೊಳಿಸಲಾಗಿದೆ.

ಈ ಹಾಳೆಯ ಮೇಲ್ಭಾಗವನ್ನು ವಿದ್ಯಾರ್ಥಿಯ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ಆವೃತ್ತಿ ಸಂಖ್ಯೆ ಮತ್ತು ಕ್ರಮಸಂಖ್ಯೆಯನ್ನು ತುಂಬುವ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಕೆಳಭಾಗವನ್ನು, ಉತ್ತರಗಳನ್ನು ಗುರುತು ಹಾಕುವುದಕ್ಕೆ, ಕೊಠಡಿ ಮೇಲ್ವಿಚಾರಕರು ಮತ್ತು ವಿದ್ಯಾರ್ಥಿಗಳು ತಮ್ಮ ಸಹಿ ಹಾಕುವುದಕ್ಕೆ ರೂಪಿಸಲಾಗಿದೆ. ವಿಷಯಕ್ಕೆ ಸಂಬಂಧಿಸಿದ ಸ್ಥಳದಲ್ಲಿ ವಿವರವನ್ನು ಮುಂಚಿತವಾಗಿಯೇ ಮುದ್ರಿಸಲಾಗಿರುತ್ತದೆ. ಪ್ರತಿಯೊಂದು ಬಾಬ್ತಿಗೆ ಸಂಬಂಧಿಸಿದಂತೆ ಇರುವ ಚೌಕಾಕಾರದ ಖಾಲಿ ಮನೆಗಳನ್ನು ವಿದ್ಯಾರ್ಥಿಯು ದೊಡ್ಡ ಅಕ್ಷರಗಳಲ್ಲಿ ಮತ್ತು ಸಂಖ್ಯೆಗಳಲ್ಲಿ ತುಂಬಬೇಕು. ಅಕ್ಷರಗಳು ಅಥವಾ ಸಂಖ್ಯೆಗಳಿಗೆ ಸಂಬಂಧಿಸಿ ಇರುವ ವೃತ್ತಗಳನ್ನು, ಕೇವಲ ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರವೇ ಸಂಪೂರ್ಣವಾಗಿ ತುಂಬಬೇಕು.

**8.4 . ಒಎಂಆರ್ ಉತ್ತರದ ಹಾಳೆಯ ಮಾದರಿ ಪ್ರತಿ:**

ಒಎಂಆರ್ ಉತ್ತರದ ಹಾಳೆಯ ಒಂದು ಮಾದರಿ ಪ್ರತಿಯನ್ನು ಕ.ಪ.ಪ್ರಾ.ದ ವೆಬ್‌ಸೈಟ್ http://kea.kar.nic.in ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ https://twd.karnataka.gov.in ನಲ್ಲಿ ಪ್ರಕಟಿಸಲಾಗುವುದು. ಅದನ್ನು ಡೌನ್‌ಲೋಡ್ ಮಾಡಿಕೊಂಡು ಅದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆದುಕೊಳ್ಳುವುದು. ಒಎಂಆರ್ ಮಾದರಿ ಪ್ರತಿಯ ನಾಲ್ಕೈದು ಜೆರಾಕ್ಸ್ ಪ್ರತಿಗಳನ್ನು ಮಾಡಿಕೊಂಡು, ಮನೆಯಲ್ಲಿ ಅವುಗಳ ಮೇಲೆ ಉತ್ತರ ತುಂಬುವ ಅಭ್ಯಾಸ ಮಾಡಿ. ವಿದ್ಯಾರ್ಥಿಗಳು, ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಅಗತ್ಯವಿರುವ ಬಾಬ್ತುಗಳನ್ನು ತುಂಬುವುದಕ್ಕೆ ಮತ್ತು ಗುರುತು ಮಾಡುವುದಕ್ಕೆ ಸಂಬಂಧಿಸಿದಂತೆ ಬಳಸುವ ಮೂಲಕ ಅಭ್ಯಾಸ ಮಾಡಬಹುದು. ಹೀಗೆ ಮಾಡುವುದರಿಂದ ನೀವು, ಪರೀಕ್ಷೆಯನ್ನು ನಿಜವಾಗಿ ಬರೆಯುವ ಸಮಯದಲ್ಲಿ, ಮೂಲ ಒಎಂಆರ್ ಉತ್ತರದ ಹಾಳೆಯಲ್ಲಿ ಹೇಗೆ ಸರಿಯಾದ ರೀತಿಯಲ್ಲಿ ವಿವರಗಳನ್ನು ತುಂಬಬೇಕಿರುವುದೋ ಅದೇ ರೀತಿಯಲ್ಲಿಯೇ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆ ಆವೃತ್ತಿ ಸಂಕೇತ, ಮೊದಲಾದ ವಿವರಗಳನ್ನು ಬರೆಯುವ ಮತ್ತು ತುಂಬುವ ವಿಷಯದಲ್ಲಿ ಹೆಚ್ಚಿನ ನಿಖರತೆ ಪಡೆದುಕೊಳ್ಳುವಿರಿ.

OMR ಉತ್ತರದ ಹಾಳೆಯ ಮೇಲೆ ವಿವರಗಳನ್ನು ತುಂಬುವಾಗ ವಹಿಸಬೇಕಾದ ಮುನ್ನೆಚ್ಚರಿಕೆಗಳ ಕುರಿತು ಹೆಚ್ಚಿನ ವಿವರಗಳನ್ನು ಈ ಮುಂದೆ ನೀಡಲಾಗಿದೆ:

(i) OMR ಉತ್ತರದ ಹಾಳೆಯು, ಎರಡು ಹಾಳೆಗಳನ್ನು ಒಳಗೊಂಡಿರುತ್ತದೆ.
(ii) OMR ಉತ್ತರದ ಮೇಲ್ಭಾಗದ ಹಾಳೆಯನ್ನು ಸರಿಯಾದ ಉತ್ತರಗಳನ್ನು ಗುರುತು ಹಾಕುವುದಕ್ಕೆ ಮತ್ತು ಆನಂತರ ಅದನ್ನು ಸ್ಕ್ಯಾನ್ ಹಾಗೂ ಮೌಲ್ಯಮಾಪನ ಮಾಡುವುದಕ್ಕೆ ಬಳಸಲಾಗುವುದು. ಕೆಳಭಾಗದ ಹಾಳೆಯನ್ನು, ಪರೀಕ್ಷೆಯ ಪ್ರತಿಯೊಂದು ಅವಧಿ ಮುಗಿದ ನಂತರ ವಿದ್ಯಾರ್ಥಿಗೆ ಕೊಡಲಾಗುವುದು. ಕೆಳಭಾಗದ ಹಾಳೆಗೆ ಒಂದು ವಿಶೇಷ ಬಗೆಯ ರಾಸಾಯನಿಕ ವಸ್ತುವನ್ನು ಬಳಿಯಲಾಗಿದ್ದು, ಅದು ಕಾರ್ಬನ್ ಪೇಪರ್‌ರೀತಿ ಕೆಲಸ ಮಾಡುತ್ತದೆ. ವಿದ್ಯಾ , ಮೇಲ್ಭಾಗದ ಹಾಳೆಯ ಮೇಲೆ ವೃತ್ತಗಳನ್ನು ತುಂಬಿದಾಗ, ಕೆಳಭಾಗದ ಹಾಳೆಯ ಮೇಲೆ ಬೀಳುವ ಒತ್ತಡವು, ಸಹಜವಾಗಿಯೇ ಅದರ ಮೇಲೆ ಮೇಲ್ಭಾಗದ ಹಾಳೆಯ ಪಡಿಯಚ್ಚನ್ನು ಸೃಷ್ಟಿಸುತ್ತದೆ.

**8.5 ಬಾಲ್ ಪಾಯಿಂಟ್ ಪೆನ್ನನ್ನೇ ಏಕೆ ಬಳಸಬೇಕು?**

ವಿದ್ಯಾರ್ಥಿಗಳು, OMR ಉತ್ತರದ ಹಾಳೆಯ ಪಡಿಯಚ್ಚು ಅಥವಾ ಯಥಾಪ್ರತಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ನೀಡಲಾಗಿದೆ ಮತ್ತು ಒಎಂಆರ್ ಉತ್ತರ ಪತ್ರಿಕೆಯು ಎರಡು ಹಾಳೆಗಳ ಒಂದು ಸೆಟ್ ಆಗಿರುತ್ತದೆ ಎನ್ನುವುದು ನಿಮ್ಮ ನೆನಪಿನಲ್ಲಿರಲಿ. ಮೇಲಿನ ಹಾಳೆಯಲ್ಲಿರುವ ವೃತ್ತದ ಮೇಲೆ ನೀವು ಷೇಡ್ ಮಾಡಿದಾಗ, ಅದರಿಂದ ಬೀಳುವ ಒತ್ತಡದಿಂದಾಗಿ, ಕೆಳಗಿನ ಹಾಳೆಯಲ್ಲಿರುವ ಅದೇ ವೃತ್ತದಲ್ಲಿ ಕಪ್ಪು ಬಣ್ಣದ ಗುರುತು ಮೂಡುತ್ತದೆ. ನಿಬ್ ಪೆನ್ನನ್ನು ಬಳಸಿದರೆ, ಮೇಲಿನ ಹಾಳೆಯ ಮೇಲೆ ಬೀಳುವ ಒತ್ತಡದ ಪ್ರಮಾಣವು ಕೆಳಗಿನ ಹಾಳೆಯ ಮೇಲಿರುವ ರಾಸಾಯನಿಕವನ್ನು ಪಟು(ಆಕ್ಟಿವ್) ಗೊಳಿಸುವುದಕ್ಕೆ ಸಾಕಾಗುವುದಿಲ್ಲ. ಇದಕ್ಕೆ ಬದಲಾಗಿ, ಬಾಲ್‌ಪಾಯಿಂಟ್ ಪೆನ್ ಅನ್ನು ಬಳಸಿದಾಗ, ಅದು ಕೆಳಗಿನ ಹಾಳೆಯಲ್ಲಿರುವ ರಾಸಾಯನಿಕವನ್ನು ಕಪ್ಪು ಬಣ್ಣದ ಗುರುತಾಗಿ ಬದಲಾಯಿಸುವುದಕ್ಕೆ ಬೇಕಿರುವಷ್ಟು ಒತ್ತಡವನ್ನು ಹಾಕುತ್ತದೆ. ಈ ಕಾರಣಕ್ಕಾಗಿಯೇ, ನೀವು ನೀಲಿ/ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ಅನ್ನು ಮಾತ್ರ ಬಳಸಬೇಕು ಎನ್ನುವುದು ನಮ್ಮ ಅಪೇಕ್ಷೆಯಾಗಿದೆ.

**8.6 ಒಎಂಆರ್‌ಉತ್ತರದ ಹಾಳೆಯ ಮೇಲ್ಭಾಗದಲ್ಲಿ ಬರೆಯುವಾಗ/ಷೇಡ್ ಮಾಡುವಾಗ ವಹಿಸಬೇಕಾದ ಪ್ರಮುಖ ಮುನ್ನೆಚ್ಚರಿಕೆಗಳು:**

**a) ಆರಂಭದ 10 ನಿಮಿಷಗಳು:**

ಪರೀಕ್ಷೆಯ ಅವಧಿಯ ಮೊದಲ ಹತ್ತು ನಿಮಿಷಗಳನ್ನು, OMR ಉತ್ತರ ಹಾಳೆಗಳ ಮೇಲ್ಭಾಗದಲ್ಲಿ ಕೊಟ್ಟಿರುವ ಅಂಕಣಗಳಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರು, ನೊಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ಆವೃತ್ತಿ ಸಂಕೇತ ಮತ್ತು ಕ್ರಮ ಸಂಖ್ಯೆಯಂಥ ವಿವರಗಳನ್ನು ಬರೆಯುವುದಕ್ಕಾಗಿ/ಷೇಡ್ ಮಾಡುವುದಕ್ಕಾಗಿ ನೀಡಲಾಗುವುದು. ತಮ್ಮ ಸರಿಯಾದ ನೊಂದಣಿ ಸಂಖ್ಯೆ ಮತ್ತು ವರ್ಷನ್ ಕೋಡ್‌ಅನ್ನು ಬರೆಯದಿರುವ/ಷೇಡ್ ಮಾಡದಿರುವ ವಿದ್ಯಾರ್ಥಿಗಳ ಒಎಂಆರ್ ಉತ್ತರ ಹಾಳೆಗಳನ್ನು ಸ್ಕ್ಯಾನ್ ಮಾಡಲಾಗುವುದಿಲ್ಲ ಹಾಗೂ ಅಂಥ ವಿದ್ಯಾರ್ಥಿಗಳಿಗೆ ಯಾವುದೇ

ರ್‍ಯಾಂಕನ್ನು ನೀಡಲಾಗುವುದಿಲ್ಲ. ಹೆಸರು, ನೊಂದಣಿ ಸಂಖ್ಯೆ ಮತ್ತು ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್‌ಗೆ ಸಂಬಂಧಪಟ್ಟ ನಮೂದುಗಳು ಅತ್ಯಂತ ನಿರ್ಣಾಯಕವಾದವುಗಳಾಗಿವೆ. ಆದ್ದರಿಂದ, ಓ.ಎಮ್.ಆರ್ ಉತ್ತರದ ಹಾಳೆಯ ಮೇಲ್ಭಾಗದಲ್ಲಿ ಈ ಮೂರು ಬಾಬ್ತುಗಳನ್ನು ಬರೆಯುವಾಗ ಮತ್ತು ಷೇಡ್ ಮಾಡುವಾಗ ವಿದ್ಯಾರ್ಥಿಗಳು ಹೆಚ್ಚಿನ ಮುನ್ನೆಚ್ಚರಿಕೆ ವಹಿಸಬೇಕೆಂದು ಸಲಹೆ ನೀಡಲಾಗಿದೆ.

ವಿದ್ಯಾರ್ಥಿಗಳು ಪರೀಕ್ಷೆಯ ಅವಧಿಯ ಆರಂಭದಲ್ಲಿ ನೀಡಲಾಗುವ ಆಪ್ಟಿಕಲ್ ಮಾರ್ಕ್ ರೀಡರ್ (OMR) ಉತ್ತರ ಹಾಳೆಯ ಮೇಲೆ, ಸರಿಯಾದ ಉತ್ತರಗಳನ್ನು ಗುರುತು ಮಾಡಬೇಕಿರುತ್ತದೆ. ಪ್ರತಿ ಪ್ರಶ್ನೆಯು, ಒಂದೇ ಒಂದು ಸರಿಯಾದ ಉತ್ತರವನ್ನು ಮಾತ್ರ ಹೊಂದಿರುತ್ತದೆ. ವಿದ್ಯಾರ್ಥಿಗಳು **ನೀಲಿ** ಅಥವಾ **ಕಪ್ಪು** ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಮಾತ್ರ ಬಳಸಿ, ಪ್ರಶ್ನೆ ಸಂಖ್ಯೆಗೆ ಸಂಬಂಧಿಸಿದಂತೆ ನೀಡಿರುವ ವೃತ್ತಗಳಲ್ಲಿ ಒಂದು ವೃತ್ತವನ್ನು ಮಾತ್ರ ಪೂರ್ಣವಾಗಿ ಷೇಡ್ ಮಾಡುವ ಮೂಲಕ, ಸರಿಯಾದ ಉತ್ತರವನ್ನು ಗುರುತು ಮಾಡಬೇಕು.

ಒಂದು ವೇಳೆ OMR ನಲ್ಲಿ ಅಭ್ಯರ್ಥಿಯ ಮಾಹಿತಿಯು Preprinted ಆಗಿದ್ದರೆ ವಿದ್ಯಾರ್ಥಿಗಳು ಮಾಹಿತಿಯನ್ನು ತುಂಬುವ ಅವಶ್ಯಕತೆ ಇರುವುದಿಲ್ಲ.

**b) ನಂತರದ 120 ನಿಮಿಷಗಳು:**

OMR ಉತ್ತರ ಹಾಳೆಯ ಕೆಳಭಾಗದಲ್ಲಿ ಉತ್ತರಗಳನ್ನು ಷೇಡ್ ಮಾಡುವಾಗ ವಹಿಸಬೇಕಾದ ಪ್ರಮುಖ ಮುನ್ನೆಚ್ಚರಿಕೆಗಳು.

ಆರಂಭದ ಹತ್ತು ನಿಮಿಷಗಳ ನಂತರ, OMR ಉತ್ತರ ಹಾಳೆಯ ಕೆಳಭಾಗದಲ್ಲಿ ಉತ್ತರಗಳನ್ನು ಷೇಡ್ ಮಾಡುವುದಕ್ಕಾಗಿ, ವಿದ್ಯಾರ್ಥಿಗಳಿಗೆ 120 ನಿಮಿಷಗಳನ್ನು ನೀಡಲಾಗುವುದು. ಕೆಳಭಾಗದಲ್ಲಿ, 100 ಪ್ರಶ್ನೆಗಳಿಗೆ ಸರಿಹೊಂದುವಂತೆ 100 ಸಾಲುಗಳಿರುತ್ತವೆ. ಪ್ರಶ್ನೆ ಪತ್ರಿಕೆಯಲ್ಲಿರುವ ಉತ್ತರದ ನಾಲ್ಕು ಆಯ್ಕೆಗಳಿಗೆ ಸರಿಹೊಂದುವಂತೆ, ಪ್ರತಿ ಪ್ರಶ್ನೆ ಸಂಖ್ಯೆಯ ಎದುರಿಗೆ ನಾಲ್ಕು ವೃತ್ತಗಳನ್ನು ನೀಡಲಾಗಿರುತ್ತದೆ. ವಿದ್ಯಾರ್ಥಿಗಳು ಅವುಗಳಲ್ಲಿ ಸರಿಯಾದ ಉತ್ತರಕ್ಕೆ ಸರಿ ಹೊಂದುವಂಥ ಒಂದೇ ಒಂದು ವೃತ್ತವನ್ನು ಮಾತ್ರ ಷೇಡ್ ಮಾಡಬೇಕಿರುತ್ತದೆ.

**ಕಪ್ಪು ಮತ್ತು ನೀಲಿ ಶಾಯಿಯ ಷೇಡ್‌ಗಳಿಗೆ ಸ್ಕ್ಯಾನರ್ ಎಷ್ಟರಮಟ್ಟಿಗೆ ಸೂಕ್ಷ್ಮ ಸಂವೇದಿಯಾಗಿರುತ್ತದೆ ಎಂದರೆ, ಒಎಂಆರ್ ಉತ್ತರ ಹಾಳೆಯ ವೃತ್ತದೊಳಗೆ ಅಪ್ಪಿತಪ್ಪಿ ಮಾಡಿರುವ ಸಣ್ಣಪುಟ್ಟ ಶಾಯಿ ಗುರುತನ್ನು ಅಥವಾ ನಿರುದ್ದೇಶವಾಗಿ ಆಗಿರುವ ಶಾಯಿಯ ಚುಕ್ಕಿಯನ್ನು ಸಹ, ಸ್ಕ್ಯಾನಿಂಗ್ ಸಮಯದಲ್ಲಿ, ತುಂಬಿರುವ/ ಷೇಡ್ ಮಾಡಿರುವ ಗುರುತು ಎಂದೇ ಪರಿಗಣಿಸುತ್ತದೆ. ಇದರಿಂದಾಗಿ, ವಿದ್ಯಾರ್ಥಿಯು ಅಂಕಗಳನ್ನು ಕಳೆದುಕೊಳ್ಳಬಹುದು.** ಆದ್ದರಿಂದ, ದಯವಿಟ್ಟು, ಒಎಂಆರ್ ಉತ್ತರ ಹಾಳೆಯ ಮೇಲೆ ಪೆನ್ನಿನಿಂದ ಯಾವುದೇ ವಿಧವಾದ ಅನಗತ್ಯ ಗುರುತುಗಳನ್ನು ಮಾಡಬೇಡಿ. ಸ್ಕ್ಯಾನರ್ ಮತ್ತು ಕಂಪ್ಯೂಟರ್ ಒಟ್ಟಾಗಿ ನೀಡಿದ ಅಂಕಗಳೇ ಅಂತಿಮವಾಗುವುದರಿಂದ, ವೃತ್ತದಲ್ಲಿ ಆದ ಶಾಯಿ ಗುರುತನ್ನು ಅಳಿಸುವುದಕ್ಕಾಗಿ ಅಥವಾ ಗಣನೆಗೆ ತೆಗೆದುಕೊಳ್ಳದಿರುವುದಕ್ಕಾಗಿ ಮಾಡುವಂಥ ಮನವಿಯನ್ನು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಕೆಳಭಾಗದಲ್ಲಿರುವ ವೃತ್ತಗಳನ್ನು ಷೇಡ್ ಮಾಡುವಾಗ ಹೆಚ್ಚಿನ ಮುನ್ನೆಚ್ಚರಿಕೆ ವಹಿಸುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಲಾಗಿದೆ.

**c) ಪರೀಕ್ಷೆಯ ಅವಧಿಗೆ ಸಂಬಂಧಿಸಿದಂತೆ ಪತ್ರಿಕೆಯ ಮುಕ್ತಾಯ:**

ವಿದ್ಯಾರ್ಥಿಗಳು, ಪರೀಕ್ಷೆಯ ಅವಧಿಯು ಮುಗಿದ ನಂತರ, ಕೊಠಡಿ ಮೇಲ್ವಿಚಾರಕರು, ರಂಧ್ರಗಳನ್ನು ಹೊಂದಿರುವ (perforations) ಉತ್ತರದ ಹಾಳೆಯ ಸೆಟ್ಟಿನ ಮೇಲಿನ ಹಾಳೆಯಿಂದ ಕೆಳಗಿನ ಹಾಳೆಯನ್ನು ಬೇರ್ಪಡಿಸಿ, ಪಡಿಯಚ್ಚಿನ ಕೆಳಗಿನ ಹಾಳೆಯನ್ನು ವಿದ್ಯಾರ್ಥಿಗಳಿಗೆ ನೀಡುವರು. ಅದನ್ನು ವಿದ್ಯಾರ್ಥಿಗಳು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು. ಮೇಲಿನ ಹಾಳೆಯನ್ನು ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರಿಗೆ ನೀಡುವ ಸಲುವಾಗಿ ಕೊಠಡಿ ಮೇಲ್ವಿಚಾರಕರು ತಮ್ಮ ಬಳಿ ಇಟ್ಟುಕೊಳ್ಳುವರು. ಇದನ್ನು ಆನಂತರ ಪರೀಕ್ಷಾ ಕೇಂದ್ರದ ಉಪ ಮುಖ್ಯಅಧೀಕ್ಷಕರು ಪ್ರಾಧಿಕಾರಕ್ಕೆ ನೀಡುವರು.

ವಿದ್ಯಾರ್ಥಿಗಳು, `ಪ್ರವೇಶ ಪರೀಕ್ಷೆ-2026'ರ ಒಎಂಆರ್ ಉತ್ತರದ ಹಾಳೆಯ ಪಡಿಯಚ್ಚು ಪ್ರತಿಗಳನ್ನು ಜೋಪಾನವಾಗಿಟ್ಟುಕೊಳ್ಳಬೇಕು.

### ಸರಿಯಾಗಿ ಆಲೋಚಿಸಿದ ನಂತರ ಉತ್ತರವನ್ನು ಗುರುತು ಮಾಡಿ

ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ ನಿಂದ ಸಂಪೂರ್ಣ ತುಂಬುವುದು.




ವೃತ್ತವನ್ನು ಒಮ್ಮೆ ಗುರುತು ಮಾಡಿದ ಮೇಲೆ, ಅದನ್ನು ಅಳಿಸುವುದಕ್ಕಾಗಲೀ ಅಥವಾ ತೆಗೆದು ಹಾಕುವುದಕ್ಕಾಗಲೀ ಯಾವುದೇ ರೀತಿಯಲ್ಲೂ ಸಾಧ್ಯವಿರುವುದಿಲ್ಲ. ಆದ್ದರಿಂದ, ಸರಿಯಾದ ಉತ್ತರ ಕುರಿತು ನೀವು ತೆಗೆದುಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ. ನೀವು ಒಮ್ಮೆ ಗುರುತು ಮಾಡಿರುವುದನ್ನು ಕಾಣದಂತೆ ಮಾಡುವುದಕ್ಕಾಗಿ ಮಾರ್ಕರ್, ವೈಟ್ ಫ್ಲೂಯಿಡ್ ಅಥವಾ ಇತರ ಯಾವುದೇ ಸಾಧನವನ್ನು ಬಳಸುವುದಕ್ಕೆ ಮೇಲ್ವಿಚಾರಕರು ನಿಮಗೆ ಅನುಮತಿಸುವುದಿಲ್ಲ. ಅಲ್ಲದೆ ನಿಮಗೆ ಮತ್ತೊಂದು ಒಎಂಆರ್ ಹಾಳೆಯನ್ನು ಕೊಡುವುದಿಲ್ಲ. ವೃತ್ತದ ಮೇಲೆ ಮಾಡಿದ ಗುರುತನ್ನು ಅಳಿಸುವ ನಿಮ್ಮ ಪ್ರಯತ್ನದಲ್ಲಿ ನೀವು ಹಾಳೆಯನ್ನು ಹಾಳುಮಾಡಿಕೊಂಡರೆ, ನಿಮ್ಮ ಅವಕಾಶಗಳನ್ನು ನೀವೇ ಹಾಳು ಮಾಡಿಕೊಳ್ಳುವಿರಿ. ಒಂದು ಸಾಲಿನಲ್ಲಿ ಇರುವ ವೃತ್ತಗಳಲ್ಲಿ ಎರಡು ವೃತ್ತಗಳಿಗೆ ಗುರುತು ಮಾಡಿದ್ದು, ಅವೆರಡರಲ್ಲಿ ಯಾವುದೇ ಒಂದು ವೃತ್ತವನ್ನು ಭಾಗಶಃ ಅಳಿಸಿದ್ದರೂ ಸಹ, ಅದನ್ನು ಸ್ಕ್ಯಾನರ್ ಬಹು ಉತ್ತರಗಳೆಂದೇ ಪರಿಗಣಿಸುತ್ತದೆ. ಆದ್ದರಿಂದ, ಶಾಯಿಯಿಂದ ವೃತ್ತಕ್ಕೆ ಗುರುತು ಮಾಡುವ ಮುನ್ನ ಸರಿಯಾಗಿ ಆಲೋಚಿಸಿ ಗುರುತು ಮಾಡುವ ಸರಿಯಾದ ವಿಧಾನದಲ್ಲಿ ತೋರಿಸಿರುವಂತೆ, ಪ್ರತಿ ಪ್ರಶ್ನೆಗೆ ಒಂದೇ ಒಂದು ವೃತ್ತವನ್ನು ಮಾತ್ರ ಗುರುತು ಮಾಡಿ.

**8.7 ಸಮಾನ ಅಂಕಗಳು ಬಂದಾಗ ಮೆರಿಟ್ ನಿರ್ಣಯ:**

ಒಂದು ವೇಳೆ ಎರಡು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಒಂದೇ ಆಗಿದ್ದಲ್ಲಿ ಆ ಅಭ್ಯರ್ಥಿಗಳ ವಯಸ್ಸಿನ ಅಧಾರದ ಮೇಲೆ ಅವರ ನಡುವಿನ ಮೆರಿಟ್‌ನ್ನು ನಿರ್ಧರಿಸಲಾಗುವುದು. ಅಂದರೆ ಇಂತಹ ಅಭ್ಯರ್ಥಿಗಳ ಪೈಕಿ ವಯಸ್ಸಿನಲ್ಲಿ ಕಿರಿಯನಾದ ಅಭ್ಯರ್ಥಿಗಿಂತ ಹಿರಿಯನಾದ ಅಭ್ಯರ್ಥಿಯನ್ನು ಮೊದಲು ಪರಿಗಣಿಸಲಾಗುವುದು. ಆದಾಗ್ಯೂ ಎರಡು ಅಥವಾ ಅದಕ್ಕಿಂತ ಹೆಚ್ಚು ಸಮ ವಯಸ್ಸಿನ ಅಭ್ಯರ್ಥಿಗಳು ಇದ್ದ ಪಕ್ಷದಲ್ಲಿ ಅಭ್ಯರ್ಥಿಯ ಹೆಸರಿನ ವರ್ಣಾಕ್ಷರದ ಕ್ರಮನುಸಾರ ಮೆರಿಟ್ ನಿರ್ಧರಿಸಲಾಗುವುದು, ಆದಾಗ್ಯೂ ಎರಡು ಅಥವಾ ಅದಕ್ಕಿಂತ ಹೆಚ್ಚು ಸಮ ವಯಸ್ಸಿನ ಅಭ್ಯರ್ಥಿಗಳು ಇದ್ದ ಪಕ್ಷದಲ್ಲಿ ತಂದೆಯ ಹೆಸರಿನ ವರ್ಣಾಕ್ಷರದ ಕ್ರಮಾನುಸಾರ ಮೆರಿಟ್ ಪಟ್ಟಿ ನಿರ್ಧರಿಸಲಾಗುವುದು.

**8.8 ಫಲಿತಾಂಶ ಪ್ರಕಟಣೆ:**

ಪ್ರವೇಶ ಪರೀಕ್ಷೆ ಮುಗಿದ ನಂತರ, ತಾತ್ಕಾಲಿಕ ಕೀ ಉತ್ತರಗಳನ್ನು ನಿಗದಿಪಡಿಸಿದ ದಿನಾಂಕದಂದು ಕ.ಪ.ಪ್ರಾ.ದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗುವುದು. ಹೀಗೆ ಪ್ರಕಟಿಸಲಾದ ಯಾವುದೇ ತಾತ್ಕಾಲಿಕ ಕೀ ಉತ್ತರಕ್ಕೆ ಸಂಬಂಧಿಸಿದಂತೆ, ವಿದ್ಯಾರ್ಥಿಗಳು / ಪೋಷಕರಲ್ಲಿ ಯಾವುದೇ ಆಕ್ಷೇಪಗಳಿದ್ದ ಪಕ್ಷದಲ್ಲಿ, ಅವುಗಳಿಗೆ ಸಂಬಂಧಿಸಿದ ಎಲ್ಲಾ ಪೂರಕ ದಾಖಲೆಗಳು / ಸಮರ್ಥನೆಗಳ ಜೊತೆಯಲ್ಲಿ, ಅಂಥ ಆಕ್ಷೇಪಣೆಗಳನ್ನು ಮುಂದೆ ಪ್ರಕಟಿಸಲಾಗುವ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕಿರುತ್ತದೆ. ಕ.ಪ.ಪ್ರಾ. ಸ್ವೀಕರಿಸಿದ ಇಂಥ ಆಕ್ಷೇಪಣೆಗಳನ್ನು ವಿಷಯ ತಜ್ಞರ ಸಮಿತಿಯ ಮುಂದೆ ಮಂಡಿಸಲಾಗುವುದು. ಸರಿಯಾದ ಕೀ ಉತ್ತರವನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದಂತೆ ಈ ಸಮಿತಿ ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ. ವಿಷಯ ತಜ್ಞರ ಸಮಿತಿ ಅನುಮೋದಿಸಿದ ಕೀ ಉತ್ತರವನ್ನು, ಮೆರಿಟ್ ಕ್ರಮವನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನದ ಸಮಯದಲ್ಲಿ ಅನ್ವಯಿಸಲಾಗುವುದು.

**ಸೂಚನೆ:** ಮೌಲ್ಯಮಾಪನ ಮಾಡುವ ಮತ್ತು ಅಂಕ ನೀಡುವ ಪದ್ಧತಿಯು ಸಂಪೂರ್ಣವಾಗಿ ದೋಷರಹಿತ ವಾಗಿರುವುದರಿಂದ, ಒಎಂಆರ್ ಉತ್ತರ ಹಾಳೆಗಳ ಮರು-ಎಣಿಕೆಗೆ ಅಥವಾ ಮರುಮೌಲ್ಯಮಾಪನಕ್ಕೆ ಸಂಬಂಧಿಸಿದ ಮನವಿಗಳನ್ನು ಸ್ವೀಕರಿಸುವುದಿಲ್ಲ.

### 8. ಸೀಟು ಹಂಚಿಕೆ ಮತ್ತು ದಾಖಲಾತಿ:

ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ಆಧಾರದ ಮೇಲೆ ಶಾಲಾ ಮಟ್ಟದಲ್ಲಿ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಿ, ಶಾಲಾ ಮಟ್ಟದಲ್ಲಿ ಪರಿಶಿಷ್ಟ ವರ್ಗ ಬಾಲಕ, ಬಾಲಕಿಯರು ಮತ್ತು ಇತರೆ ಮೀಸಲಾತಿಗನುಗುಣವಾಗಿ ಆನ್‌ಲೈನ್ ಸೀಟು ಹಂಚಿಕೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುತ್ತದೆ.

- ✓ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು(ಮೆರಿಟ್),
- ✓ ಅಭ್ಯರ್ಥಿಯು ಸೇರ ಬಯಸುವ ವಸತಿ ಶಾಲೆಗಳ ಶಾಲಾವಾರು ಆದ್ಯತೆ
- ✓ ಅಭ್ಯರ್ಥಿಗೆ ಸರ್ಕಾರವು ನಿಗದಿಪಡಿಸಿದ ಮೀಸಲಾತಿ

ಮೇಲ್ಕಂಡ ಅಂಶಗಳ ಆಧಾರದ ಮೇಲೆ seat matrix ಸಿದ್ಧಪಡಿಸಿ ಗಣಕೀಕೃತ ಸ್ವಯಂ ಆಯ್ಕೆ (computerized auto selection) ಮೂಲಕ ಪಾರದರ್ಶಕವಾಗಿ ಈ ಕೆಳಕಂಡಂತೆ ಸೀಟು ಹಂಚಿಕೆ ಮಾಡಲಾಗುತ್ತಿದೆ.

1. ಅಭ್ಯರ್ಥಿಯು ರಾಜ್ಯದಲ್ಲಿರುವ ಯಾವುದೇ ವಸತಿ ಶಾಲೆಗಳಿಗೆ ಪ್ರವೇಶ ಪಡೆಯಲು ಅರ್ಹರಿರುತ್ತಾರೆ.
2. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯ ತಾವು ಸೇರ ಬಯಸಲು ನಮೂದಿಸಿರುವ ವಸತಿ ಶಾಲೆಗಳ ಆದ್ಯತಾ ಕ್ರಮ.
3. ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ವಿದ್ಯಾರ್ಥಿ ಬಯಸುವ ವಸತಿ ಶಾಲೆಯನ್ನು Computerised Auto Selection ಮಾಡಲಾಗುವುದು.
4. ಮೊದಲನೇ ಸುತ್ತಿನಲ್ಲಿ ಹಂಚಿಕೆಯಾಗದೆ ಖಾಲಿ ಉಳಿದ ಸೀಟುಗಳು ಹಾಗೂ ಮೊದಲನೇ ಸುತ್ತಿನಲ್ಲಿ ಹಂಚಿಕೆ ಪಡೆದು ಶಾಲೆಗೆ ದಾಖಲಾಗದೇ ಉಳಿದ ಸೀಟುಗಳನ್ನು ಕ್ರೂಢೀಕರಿಸಿ, ಮೊದಲನೇ ಸುತ್ತಿನಲ್ಲಿ ಭಾಗವಹಿಸಿ ಸೀಟು ಹಂಚಿಕೆಯಾಗದೇ ಇರುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಿ 2ನೇ ಸುತ್ತಿನ ಜಿಲ್ಲಾ ಮಟ್ಟದ ಆನ್‌ಲೈನ್ ಸೀಟು ಹಂಚಿಕೆಯನ್ನು ಮಾಡುವುದು. 2ನೇ ಸುತ್ತಿನ ಪ್ರವೇಶ ಪ್ರಕ್ರಿಯೆ ಮುಕ್ತಾಯದ ನಂತರ 3ನೇ ಸುತ್ತಿನ ಕೌನ್ಸಿಲಿಂಗ್ ನಡೆಸಲಾಗುವುದು. ಇನ್ನು ಹೆಚ್ಚಿನ ಸುತ್ತಿನ ಕೌನ್ಸಿಲಿಂಗ್ ಅಗತ್ಯವಿದೆ ಎಂಬ ಅಂಶ ಗಮನಕ್ಕೆ ಬಂದರೆ ಕೌನ್ಸಿಲಿಂಗ್ ನಡೆಸಲಾಗುವುದು.
5. ಕಾಲಕಾಲಕ್ಕೆ ಈ ನಿಟ್ಟಿನಲ್ಲಿ ಸರ್ಕಾರ ಹೊರಡಿಸುವ ಆದೇಶಗಳಂತೆ ಸೂಕ್ತ ಮಾರ್ಪಾಟುಗಳೊಂದಿಗೆ ಸೀಟು ಹಂಚಿಕೆ ಮಾಡಲಾಗುವುದು.
6. ಮೇಲ್ಕಂಡಂತೆ ಸೀಟು ಹಂಚಿಕೆ ಮಾಡಿದ ತರುವಾಯ ಖಾಲಿ ಉಳಿಯುವ ಸ್ಥಾನಗಳಿಗೆ ಈ ಕೆಳಕಂಡ ಕ್ರಮ ಅನುಸರಿಸಲಾಗುವದು.

## ಸಂಕ್ಷಿಪ್ತ ಮಾಹಿತಿ

1. ಅಭ್ಯರ್ಥಿಯು ರಾಜ್ಯದಲ್ಲಿರುವ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಯಾವುದೇ ವಸತಿ ಶಾಲೆ /ಕಾಲೇಜಿನಿಂದ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಯು ಮೊದಲು ತನ್ನ SATS ಸಂಖ್ಯೆಯನ್ನು ತಾನು ಓದುತ್ತಿರುವ ಶಾಲೆಯಿಂದ ಪಡೆದು ನಂತರ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಯಾವುದೇ ವಸತಿ ಶಾಲೆಯ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ **https://cetonline.karnataka.gov.in/kea/** ನಲ್ಲಿ **https://kreis.karnataka.gov.in** ಲಿಂಕ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು.
4. ಅಭ್ಯರ್ಥಿಯು ತನ್ನ SATS ಸಂಖ್ಯೆಯನ್ನು ನಮೂದಿಸಬೇಕು, ನಂತರ ತನ್ನ ಎಲ್ಲಾ ವಿವರಗಳನ್ನು ಕಂಪ್ಯೂಟರ್ ಪರದೆಯ ಮೇಲೆ ನೋಡಲು ಅವಕಾಶವಿರುತ್ತದೆ.
5. ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ತಾಯಿಯ ಹೆಸರು, ಜನ್ಮ ದಿನಾಂಕ, ಲಿಂಗ ಇತ್ಯಾದಿಗಳನ್ನು ನೋಡಬಹುದು, ಇವುಗಳಲ್ಲಿ ಏನಾದರೂ ವ್ಯತ್ಯಾಸವಿದ್ದಲ್ಲಿ ತಿದ್ದುಪಡಿ ಮಾಡಿಕೊಂಡು ನಂತರ ಅರ್ಜಿ ಸಲ್ಲಿಸಲು ಸೂಚಿಸಿದೆ.
6. ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.

7. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಪರೀಕ್ಷೆ ಮತ್ತು ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ರವಾನಿಸಬೇಕಾಗಿರುವುದರಿಂದ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
8. 2026-27 ನೇ ಸಾಲಿನ 12 ಏಕಲವ್ಯ ಮಾದರಿ ವಸತಿ ಶಾಲೆಗಳ 6ನೇ ತರಗತಿಯ ಒಟ್ಟು 720 ಸ್ಥಾನಗಳಲ್ಲಿ ಶೇ.100% ಸ್ಥಾನಗಳನ್ನು ಪ್ರವೇಶ ಪರೀಕ್ಷೆ ಮೂಲಕ ಹಂಚಿಕೆ ಮಾಡಲಾಗುವುದು.

**ಪ್ರವೇಶಾತಿಯ ಮೀಸಲಾತಿ:- ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಪ್ರತಿಯೊಂದು ಶಾಲೆಗಳಲ್ಲಿ 60 ಸ್ಥಾನಗಳಿದ್ದು, ಮೀಸಲಾತಿ ಈ ಕೆಳಕಂಡಂತಿದೆ:-**

| ಕ್ರ. ಸಂ | ಮೀಸಲಾತಿ ವಿವರ | ಶೇಕಡವಾರು ಮೀಸಲಾತಿ | 60 ಸ್ಥಾನಗಳಿಗೆ ಮೀಸಲಾತಿ ಸ್ಥಾನಗಳ ಸಂಖ್ಯೆ |
|---|---|---|---|
| 1 | ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು | 80% | 48 |
| 2 | ನೈಜದುರ್ಬಲ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳು (PVTGs) | 5% | 3 |
| 3 | ಡಿ ನೋಟಿಫೈಡ್ /ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳು | 5% | 3 |
| 4 | 1. ಎಡಪಂಥೀಯ ಉಗ್ರವಾದ/ದಂಗೆಗಳು/ ಕೋವಿಡ್ ನಿಂದ ಪೋಷಕರು ಮೃತಪಟ್ಟು ಅನಾಥವಾಗಿರುವ ಮಕ್ಕಳು<br>2. ವಿಧವೆಯರ ಮಕ್ಕಳು<br>3. ವಿಕಲಚೇತನ ಪೋಷಕರ ಮಕ್ಕಳು/ ಅನಾಥ ಮಗು | 7% | 4 |
| 5 | 4.ಭೂ ದಾನಿಗಳ ಮಕ್ಕಳು | 3% | 2 |
| **ಒಟ್ಟು** | | **100%** | **60** |

9. ವಿಶೇಷ ವರ್ಗಗಳಿಗೆ ಸೇರಿದವರಾಗಿದ್ದಲ್ಲಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ದಾಖಲೆಗಳನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಶಾಲೆಯ ಪ್ರಾಂಶುಪಾಲರಿಗೆ ತೋರಿಸಬೇಕು ಮತ್ತು ಅವುಗಳ ಒಂದು ನಕಲು ಪ್ರತಿಯನ್ನು ಸಲ್ಲಿಸಬೇಕು.
10. ವಸತಿ ಶಾಲೆಗಳ ಆಯ್ಕೆಯನ್ನು ಆದ್ಯತಾ ಕ್ರಮದಲ್ಲಿ ನಮೂದಿಸುವ ಕುರಿತು – ವಸತಿ ಶಾಲೆ/ಕಾಲೇಜುಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಾರೋ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಹಂಚಿಕೆಗೆ ಪರಿಗಣಿಸಲಾಗುವುದು. ಆದುದರಿಂದ ಅಭ್ಯರ್ಥಿಗಳು ತಮ್ಮ ಸೀಟು ಹಂಚಿಕೆ ಅವಕಾಶವನ್ನು ಹೆಚ್ಚಿಸಿಕೊಳ್ಳಲು ತಮ್ಮ ತಾಲ್ಲೂಕು/ ಜಿಲ್ಲೆಯಲ್ಲಿರುವ **EMRS** ನ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸತಕ್ಕದ್ದು. ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ Computerised Auto Selection ಮೂಲಕ ಸೀಟು ಹಂಚಿಕೆಯನ್ನು ಮಾಡಲಾಗುವುದು.

**ಪೋಷಕರ ಗಮನಕ್ಕೆ:** ಮೇಲ್ಕಂಡ ಅಂಶಗಳನ್ನು ಗಮನಿಸಿ ಅಭ್ಯರ್ಥಿಗಳ ಪೋಷಕರು ತಮ್ಮ ತಾಲ್ಲೂಕು/ ಜಿಲ್ಲೆಯಲ್ಲಿನ ಕರ್ನಾಟಕ ಪರಿಶಿಷ್ಟ ಪಂಗಡಗಳ ವಸತಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಶಾಲೆಗಳ ವಿವರಗಳನ್ನು ಪಡೆದುಕೊಂಡು, ತಮ್ಮ ಮೀಸಲಾತಿಗೆ ಸೀಟುಗಳ ಲಭ್ಯತೆಯನ್ನು ಪರಿಗಣಿಸಿ ಮಕ್ಕಳನ್ನು ಯಾವ ಶಾಲೆಗೆ ಸೇರಿಸಬೇಕು ಎಂಬುದನ್ನು ತೀರ್ಮಾನಿಸಿ, ಆಧ್ಯತಾ ಕ್ರಮದಲ್ಲಿ ನಮೂದಿಸಬೇಕು. ಆದ್ದರಿಂದ ಶಾಲೆಗಳನ್ನು ದಾಖಲಿಸುವ ಮೊದಲು ಒಂದು ಹಾಳೆಯಲ್ಲಿ ಬರೆದುಕೊಂಡು ವಿಚಾರ ಮಾಡಿ ನಂತರ ನಮೂದಿಸುವುದು **ಸೂಕ್ತ** ಅರ್ಜಿ ಸಲ್ಲಿಸಿದ ನಂತರ ಪೋಷಕರು ತಮ್ಮ ಮಗುವಿನ ಎಲ್ಲಾ ವಿವರಗಳು ಸರಿಯಾಗಿ ನಮೂದಾಗಿರುವ ಬಗ್ಗೆ ಖಚಿತ ಪಡಿಸಿಕೊಂಡು ಸ್ವೀಕೃತಿಯನ್ನು ವಸತಿ ಶಾಲೆ/ಕಾಲೇಜು ಪ್ರಾಂಶುಪಾಲರಿAದ ಪಡೆಯತಕ್ಕದ್ದು. ಯಾವುದೇ ಕಾರಣಕ್ಕೂ ತಿದ್ದುಪಡಿ ಮಾಡಲು ಮತ್ತೊಮ್ಮೆ ಅವಕಾಶ ನೀಡಲಾಗುವುದಿಲ್ಲ.

## ವಂಚಕರ ಬಗ್ಗೆ ಎಚ್ಚರದಿಂದಿರಿ

ಕೆಲವು ವ್ಯಕ್ತಿಗಳು, ಕ.ಪ.ಪ್ರಾ.ದ ಅಧಿಕಾರಿಗಳು ನಮಗೆ ಚೆನ್ನಾಗಿ ಗೊತ್ತು ಎಂದು ಹೇಳಿಕೊಂಡು ಕ.ಪ.ಪ್ರಾ.ದ ಮೂಲಕ ಅಕ್ರಮವಾಗಿ ನಿಮಗೆ ಸೀಟು ದೊರಕಿಸಿಕೊಡುವ ಆಶ್ವಾಸನೆ ನೀಡಬಹುದು. ಆದರೆ, ಕ.ಪ.ಪ್ರಾ.ವು ಸೀಟು ಹಂಚಿಕೆಯಲ್ಲಿ ಯಾವುದೇ ಅಕ್ರಮ ವ್ಯವಹಾರಕ್ಕೆ ಆಸ್ಪದ ನೀಡುವುದಿಲ್ಲ. ಅಂಥ ಯಾರಾದರೂ ವ್ಯಕ್ತಿಗಳು ನಿಮ್ಮ ಗಮನಕ್ಕೆ ಬಂದ ಪಕ್ಷದಲ್ಲಿ, ಕೂಡಲೇ ಲಿಖಿತ ರೂಪದಲ್ಲಿಯಾಗಲೀ ಅಥವಾ ಪ್ರಾಧಿಕಾರಕ್ಕೆ ಇ-ಮೇಲ್ ಮಾಡುವ ಮೂಲಕವಾಗಲೀ ಕ.ಪ.ಪ್ರಾ. ದ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡಿ. ಸೀಟು ಹಂಚಿಕೆಯು, ಸರ್ಕಾರ ನೀಡುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಕಟ್ಟುನಿಟ್ಟಾಗಿ ಆಧರಿಸಿರುತ್ತದೆ. ಹಾಗೆಯೇ, ವಿದ್ಯಾರ್ಥಿ/ವಿದ್ಯಾರ್ಥಿನಿಯ ಮೆರಿಟ್, ಮೀಸಲಾತಿ ಮತ್ತು ಆತ/ ಆಕೆ ನಮೂದಿಸಿರುವ ಇಚ್ಛೆಯನ್ನು ಮಾತ್ರವೇ ಆಧರಿಸಿ ಅವರಿಗೆ ಸೀಟನ್ನು ಹಂಚಿಕೆ ಮಾಡಲಾಗುವುದು. ಆದ್ದರಿಂದ, ಸುಳ್ಳು ಆಶ್ವಾಸನೆಗಳನ್ನು ಕೊಡುವ ಯಾರೇ ಅಪರಿಚಿತ ವ್ಯಕ್ತಿಗಳನ್ನು ನಂಬತಕ್ಕದ್ದಲ್ಲ.

ನಿರ್ದೇಶಕರು
ಪರಿಶಿಷ್ಟ ವಂಗಡಗಳ ಕಲ್ಯಾಣ ಇಲಾಖೆ,
ಬೆಂಗಳೂರು